**ಪಿ.ಡಬ್ಲ್ಯು: 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 27-06-2026**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರ ಇಂಗ್ಲೀಷ್ ಭಾಷೆಯಲ್ಲಿ ಆದ್ದರಿಂದ ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಆರೋಪಿತರನ್ನು ನಾನು ನೋಡಿದ್ದೇನೆ. ಆರೋಪಿತರಿಗೆ ರೂ.4,50,000/- ಹಣ ನೀಡಿದ್ದೆನು. ರೂ.50,000/- ನಗದು ರೂಪದಲ್ಲಿ, ರೂ.2,50,000/- ಮತ್ತು ರೂ.1,50,000/- ಹಣವನ್ನು ಚೆಕ್ ರೂಪದಲ್ಲಿ ನೀಡಿದ್ದರು. ಸದರಿ ಹಣವನ್ನು ಯಾವ ಯಾವ ದಿನಾಂಕದಂದು ನೀಡಿದ್ದಾರೆ ಎಂದು ನನಗೆ ನೆನಪಿಲ್ಲ. ಅಗ್ರೀಮೆಂಟನ್ನು ದಿ.04-07-2022 ರಂದು ಹಳೆ ಬಸ್ ನಿಲ್ದಾಣದ ಬಳಿ ವಕೀಲರ ಕಚೇರಿಯಲ್ಲಿ ತಯಾರಿಸಿರುತ್ತಾರೆ. ಸದರಿ ದಿನಾಂಕದಂದು ನಾನು, ರಜಾಕ್, ನಾಗರಾಜ, ಶಂಕರ, ದಿನೇಶ ಮತ್ತು ನಾಗಪ್ಪ ರವರು ಇದ್ದರು. ಶಂಕರ ಮತ್ತು ನಾಗಪ್ಪ ರವರೂ ಕೂಡ ಅಗ್ರೀಮೆಂಟ್ ಗೆ ಸಹಿ ಮಾಡಿದ್ದರು. ನನಗೆ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಮತ್ತು ನಾನು ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರರಿಂದ ಹಣ ಪಡೆದು ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರರ ಮತ್ತು ಆರೋಪಿತರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿಯದೇ ಇದ್ದರೂ ಸಹ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನನಗೆ ಪ್ರಮಾಣ ಪತ್ರವನ್ನು ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**(ರೂಪಶ್ರೀ)**

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**

**ಜೆ.ಎಂ.ಎಫ್.ಸಿ., ಭಟ್ಕಳ.**